ಸಂಚಿಕೆ ೧

ಜನವರಿ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

## ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಸಂಚಿಕೆ ೧
ಜನವರಿ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ ಪು 1
ಪೋಷಕರ ಅಂಕಣ ಪು 2
ಹಬ್ಬ ಪು 3
ಅ ಆ ಅಡ್ವೆಂಚರ್ ಪು 4
ಪ್ರವಾಸ ಪು 5
ನಾ ಓದಿದ ಕಥೆ ಪು 6
ಚಿಣ್ಣರ ಚಿತ್ರ ಕಲೆ ಪು 7
ನಾ ಕಂಡ ಸಿನಿಮಾ ಪು 8
ಗಾದೆಗಳು ಪು 9


ರಜನೀ


ಮೇಘನ



ನಮಿತ


ಪ್ರಕೃತಿ


ಪ್ರೇರಣ

## ಸಂಪಾದಕೀಯ .... ರಜನೀ ಮಹೇಶ್

"ಕನ್ನಡ ಏನೆ ಕುಣಿದಾಡುವುದೆನ್ನೆದೆ
ಕನ್ನಡ ಏನೆ ಕಿವಿ ನಿಮಿರುವುದು" - ಕುವೆಂಪು

" ಕನ್ನಡ " ಎಂದಾಗ ಏನೋ ಖುಷಿ. ನಾವೆಲ್ಲ ಕನ್ನಡ ಮಾತಾಡಲು, ಓದಲು ಬರೆಯಲು ತುಂಬಾ ಸುಲಭವಾಗಿಯೇ ಕಲಿತೆವು. ನಮ್ಮ ಸುತ್ತಮುತ್ತಲಿನ ಪರಿಸರ ಕೂಡ ಕಲಿಯಲು ತುಂಬಾ ಅನುಕೂಲಕರವಾಗಿಯೇ ಇದ್ದಿತ್ತು. ಆದರೆ ಈಗ ನಮ್ಮ ಮಕ್ಕಳಿಗೆ ಕನ್ನಡ ಕಲಿಯಲು ಅಂತಹ ಒಂದು ವಾತಾವರಣ ಇಲ್ಲಿ ಇಲ್ಲ. ಅದಕ್ಕಾಗಿಯೆ ಅವರಿಗೆ ಒಂದು ಅವಕಾಶ ಕಲ್ಪಿಸಲು ಆರಂಭಿಸಿದ ನನ್ನ ಪ್ರಯತ್ನವೇ ಈ " ಚಿಗುರು ಕನ್ನಡ ಪಾಠಶಾಲೆ " .

ಕನ್ನಡಕ್ಕಾಗಿ ಹೋರಾಡಿ, ಕನ್ನಡ ಸಾಹಿತ್ಯದಲ್ಲಿ ನಮ್ಮನ್ನು ತೊಡಗಿಸಿಕೊಂಡು ಕನ್ನಡವನ್ನು ಉಳಿಸಲು ಬೆಳೆಸಲು ಆಗದಿದ್ದರೂ, ನಮ್ಮ ಮಕ್ಕಳಿಗೆ ಕನ್ನಡ ಕಲಿಸಿ ಕನ್ನಡವನ್ನು ಮುಂದಿನ ಪೀಳಿಗೆಗೆ ಸಾಗಿಸೋಣ. ಮನೆಯಲ್ಲಿ ಕನ್ನಡ ಮಾತಾಡುವ ವಾತಾವರಣ ಬೆಳೆಸೋಣ. ಪೋಷಕರೇ, ನಿಮ್ಮ ಸಹಾಯದಿಂದ ಇಂದು ಕನ್ನಡದ ಬೀಜವನ್ನು ಬಿತ್ತಿದ್ದೇವೆ. ಚಿಗುರುತ್ತಿರುವ ಈ ಮಕ್ಕಳು ಹೆಮ್ಮರವಾಗಿ ಬೆಳೆಯಲು ಸಹಾಯ ಮಾಡೋಣ. ಮನೆಯಲ್ಲಿ ಮಕ್ಕಳೊಂದಿಗೆ ಕನ್ನಡದಲ್ಲೇ ಮಾತಾಡಿ, ಕನ್ನಡವನ್ನು ಉಳಿಸೋಣ ... ಕನ್ನಡವನ್ನು ಬೆಳೆಸೋಣ...

ಜೈ ಕರ್ನಾಟಕ !



*ಹಚ್ಚೇವು ಕನ್ನಡದ ದೀಪ...*

ಚಿಗುರು ಕನ್ನಡ ಪಾಠಶಾಲೆ –ಶಾರ್ಲೆಟ್
rajanisomayaji@gmail.com



ಪೋಷಕರ ಅಂಕಣ ..... ಮೀನಾ ಗೋಪೀನಾಥ್

"ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು " – ಕುವೆಂಪು

" ಕನ್ನಡ ಭಾಷೆ " ಕೇಳುವುದಕ್ಕೆ ಎಷ್ಟು ಹಿತವಾಗಿದೆಯೋ ಮಾತಾಡಿದರೆ ಇನ್ನೆಷ್ಟು ಮಧುರ ಅಲ್ವಾ? ನಮ್ಮ ಭಾಷೆಯ ಬೆಲೆಯನ್ನು, ಮಹತ್ವವನ್ನು ಮತ್ತು ಸಂಸ್ಕೃತಿಯನ್ನು ನಮ್ಮ ಮಕ್ಕಳಲ್ಲಿ ಬೇರೂರುವ ಹಾಗೆ ಮಾಡೋದು ನಮ್ಮೆಲ್ಲರ ಜವಾಬ್ದಾರಿ. " ಮನೆಯೇ ಮೊದಲ ಪಾಠಶಾಲೆ , ಅಂತ ನಾವೆಲ್ಲಾ ಓದಿದ್ದೇವೆ, ಕೇಳಿದ್ದೇವೆ. ಹಾಗಾಗಿ ನಮ್ಮ ಮಾತೃಭಾಷೆ ಸೊಗಡು ಮತ್ತು ನಮ್ಮ ನಾಡಿನ ಅಭಿಮಾನದ ಬೀಜವನ್ನು ನಮ್ಮ ಮಕ್ಕಳ ಮನಸಿನಲ್ಲಿ ಆಳವಾಗಿ ಬಿತ್ತುವುದು ನಮ್ಮ ಕರ್ತವ್ಯ. ಈ ಕನ್ನಡ ಬೀಜವನ್ನು ಮೊಳಕೆಯೊಡಿಸಿ, ನೀರೆರೆದು " ಚಿಗುರಿದ ಕನಸುಗಳನ್ನಾಗಿ "ಬೆಳೆಸಲು ಸಹಾಯ ಮಾಡುತ್ತಿರುವ " ಚಿಗುರು ಪಾಠ ಶಾಲೆಗೆ " ಹೃತ್ಪೂರ್ವಕ ಧನ್ಯವಾದಗಳು.

ಮಕ್ಕಳು ಬೇರೆ ಯಾವ ಚಟುವಟಿಕೆಗಳನ್ನು ಮರೆತರೂ ಶುಕ್ರವಾರದ ಸಾಯಂಕಾಲದ ಚಟುವಟಿಕೆಯನ್ನು ಮರೆಯೋಲ್ಲ ನೋಡಿ, ಯಾಕೆ ಅಂತೀರಾ ? ಅದು ಚಿಗುರು ಕನ್ನಡ ಪಾಠ ಶಾಲೆ / ಆಟ ಶಾಲೆ ಸಮಯ. ಈ ರೀತಿಯಾಗಿ ನಮ್ಮ ಮಕ್ಕಳಲ್ಲಿ ಕನ್ನಡದ ಬಗ್ಗೆ ಆಸಕ್ತಿ , ಅಭಿಮಾನ ಮತ್ತು ಉತ್ಸಾಹ ಮೂಡಿಸಿರುವ ನಮ್ಮ ಚಿಗುರು ಕನ್ನಡ ಪಾಠ ಶಾಲೆಗೆ ಮತ್ತು ಅದರ ರೂವಾರಿ ರಜನೀ ಅವರಿಗೆ ಧನ್ಯವಾದಗಳು.





**ಸಂಕ್ರಾಂತಿ ಹಬ್ಬದ ವಿಶೇಷತೆ : ಆದ್ವಿಕಾ ತಾತ ಬೆ೦ಗಳೂರು**



ಸಂಕ್ರಮಣ ಅಂದರೆ ಸೂರ್ಯನು ತನ್ನ ಚಲಿಸುವ ಪಥವನ್ನು ದಕ್ಷಿಣದಿಂದ ಉತ್ತರದ ಕಡೆಗೆ ಬದಲಿಸುವ ಅವಿಸ್ಮರಣೀಯ ಸಂದರ್ಭ. ಅದನ್ನೇ ಭಾರತೀಯ ಹಿಂದುಗಳು ಮಕರ ಸಂಕ್ರಾಂತಿ ಎಂಬ ಹೆಸರಿನಲ್ಲಿ ವರ್ಷದ ಮೊದಲ ಹಬ್ಬವನ್ನು ಜನವರಿ ೧೪ ಅಥವಾ ೧೫ ರಂದು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ. ಭಾರತದ ಗ್ರಾಮೀಣ ಪ್ರದೇಶದಲ್ಲಿ ರೈತರು ತಾವು ಬೆಳೆದ ಫಸಲನ್ನು ಕೊಯ್ಲು ಮಾಡುವ ಸಂತಸವನ್ನು ಸುಗ್ಗಿ ಕಾಲ ಎಂದು ಕರೆದು ತಮ್ಮ ಜಾನುವಾರುಗಳನ್ನು ಕಿಚ್ಚು ಆಯಿಸುವ ಮೂಲಕ ಹರ್ಷ ಪಡುತ್ತಾರೆ.


ಭಾರತೀಯ ಹಿಂದು ಮಹಿಳೆಯರು ಮತ್ತು ಮಕ್ಕಳು ಈ ದಿನದಂದು ಎಳ್ಳು ಬೆಲ್ಲವನ್ನು ತಮ್ಮ ಸಂಬಧಿಕರಿಗೆ ಹಾಗು ಸ್ನೇಹಿತರಿಗೆ ಹಂಚುವ ಮೂಲಕ ಸಂಭ್ರಮ ಪಡುತ್ತಾರೆ. ಈ ಎಳ್ಳು ಬೆಲ್ಲ ಬೀರುವ ಹಿನ್ನೆಲೆ ಏನೆಂದರೆ ಎಲ್ಲರಿಗೂ ಸುಖ, ಸಮೃದ್ಧಿ, ಸಂತೋಷ ಮತ್ತು ಆರೋಗ್ಯ ಲಭಿಸಿ ಎಲ್ಲರೂ ಪ್ರೀತಿ ವಾತ್ಸಲ್ಯದಿಂದ ಇರಬೇಕೆಂಬ ಘನ ಉದ್ದೇಶವಾಗಿರುತ್ತದೆ. ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡಿ ಎಂಬ ಶುಭಾಶಯಗಳು ಇದರ ಹಿನ್ನೆಲೆ.









## ಅ ಆ ಅಡ್ವೆಂಚರ್: ಪ್ರಕೃತಿ




## ರಂಗ್ ರಂಗ್ ರಂಗೋಲಿ









# ಪ್ರವಾಸ : ನಮ್ಮ ಅಜ್ಜನ ಮನೆ ಪ್ರವಾಸ : ಪ್ರಮಿತಿ ಉಪಾಧ್ಯ







ನಮ್ಮ ಅಜ್ಜನ ಮನೆ ಪ್ರವಾಸ : ಪ್ರಮಿತಿ ಉಪಾಧ್ಯ

ನಿಮಗೆಲ್ಲ ಗೊತ್ತಿರೊ ಹಾಗೆ ನಾನು ಡಿಸೆಂಬರ್ ನಲ್ಲಿ ಇಂಡಿಯಾ ಟ್ರಿಪ್ ಹೋಗಿದ್ದೆ . ಅಲ್ಲಿ ನಾನು ನನ್ನ ಅಜ್ಜನ ಮನೆ ಕೋಟಕ್ಕೆ ಹೋಗಿದ್ದೆ. ನಾನು ಈ ಸಲ ಅಲ್ಲಿ ತುಂಬಾ ಮಜಾ ಮಾಡಿದೆ. ಕೋಟದಲ್ಲಿ ನಾನು ಅಜ್ಜನ ಜೊತೆಗೆ ಸ್ಕೂಟರ್ ನಲ್ಲಿ ರೈಡ್ ಹೋದೆ . ಅಜ್ಜನ ಮನೇಲಿ ನಾನು ಮತ್ತು ಅಕ್ಕ ತುಂಬಾ ಜನರನ್ನು ಮೀಟ್ ಮಾಡಿದ್ವಿ. ಬಾವಿಯಿಂದ ನೀರು ತೆಗೆಯೋದು ನಮಗೆ ತುಂಬಾ ಇಷ್ಟ. ಅದೇ ನೀರನ್ನು ಬಾತ್ ರೂಮ್ ಲ್ಲಿ ತುಂಬಿಸಿ ಬೆಂಕಿ ಹಾಕಿ ಹೀಟ್ ಮಾಡಿ, ಆಮೇಲೆ ಅದರಲ್ಲಿ ಸ್ನಾನ ಮಾಡಿದೆವು. ನಾವು ಬಳೆಗಾರ ಶಾಪ್ಗೆ ಹೋಗಿ ಕೈ ತುಂಬಾ ಬಳೆ ತಗೊಂಡ್ವಿ. ಕೋಟದಲ್ಲಿ ಸುಬ್ರಹ್ಮಣ್ಯ ಮಾವ ನನಗೆ **giff** ಮಾಡೋದು ಹೇಳಿಕೊಟ್ರು. ನಾವು ಸುಮಾರು ವೀಡಿಯೊ ಮಾಡಿದ್ವಿ. ಅಜ್ಜನ ಮನೇಲಿ ಪೂಜೆ ಇತ್ತು. ನಾವು ಬಾಳೆ ಎಲೇಲಿ ಊಟ ಮಾಡಿದ್ವಿ. ಒಂದು ನೈಟ್ ಯಕ್ಷಗಾನ ನೋಡೋಕೆ ಕೂಡ ಹೋಗಿದ್ವಿ. ಅಜ್ಜನ ಮನೆ ಮೇಲ್ಗಡೆ ಮನೇಲಿ ಒಂದು ಉಯ್ಯಾಲೆ ಇದೆ. ಅದರಲ್ಲಿ ಆಟ ಆಡೋದು ನಮಗೆ ತುಂಬಾ ಇಷ್ಟ. ಕೋಟದಲ್ಲಿ ನನ್ನ ಅಪ್ಪನ ಅಜ್ಜನ ಮನೆಗೆ ಕೂಡ ಹೋಗಿದ್ವಿ . ಅಲ್ಲಿ ನಾವು 2 ದನಗಳ ಜೊತೆ ಆಟ ಆಡಿದ್ವಿ. ಅವರ ಮನೇಲಿ ಒಂದು ಬೆಕ್ಕು ಕೂಡ ಇದೆ. ಗೊತ್ತಿತ್ತಾ ? ಆ ಬೆಕ್ಕು ಬರಿ ಕಾರದ ಕಡ್ಡಿ ತಿನ್ನೋದು. ಕೋಟದ ಹತ್ತಿರ ಪಡುಕೆರೆ ನನ್ನ ಇನ್ನೊಂದು ಅಜ್ಜನ ಮನೆ. ಪಡುಕೆರೆಲಿ ನಾವು ನನ್ನ ಅಪ್ಪನ ದೊಡ್ಡಪ್ಪ, ಚಿಕ್ಕಪ್ಪ ,ಮಾವ ಎಲ್ಲರನ್ನು ಮೀಟ್ ಮಾಡಿದ್ವಿ. ಅಜ್ಜನ ಮನೆಯಿಂದ **walkable** ಡಿಸ್ಟೆನ್ಸ್ ನಲ್ಲಿ ಬೀಚ್ ಇದೆ. ಅಲ್ಲಿ ತುಂಬಾ ಆಟ ಆಡಿದ್ವಿ. ಅಲ್ಲಿ ಒಂದು ನಾಯಿ ೪ ಮರಿ ಹಾಕಿತ್ತು. ಮರಿಗಳು ತುಂಬಾ ಚಂದ ಇತ್ತು. ಹೀಗಿತ್ತು ನಮ್ಮ ಅಜ್ಜನ ಮನೆ ಪ್ರವಾಸ. ಮುಂದಿನ ತಿಂಗಳು ನೀವು ಯಾರದ್ರು ನಿಮ್ಮ ಅಜ್ಜನ ಮನೆ ಪ್ರವಾಸದ ಬಗ್ಗೆ ಬರೀರಿ.











**ನಾ ಓದಿದ ಕಥೆ : ಮೇಘನ ಪಂಡಿತ್**

**ಈಶ್ವರನ ಜನನ ಕಥೆ**

ಪುರಾಣದ ಕಥೆಗಳ ಪ್ರಕಾರ, ಒಂದು ದಿನ ವಿಷ್ಣು ಮತ್ತು ಬ್ರಹ್ಮ, ನಮ್ಮಿಬ್ಬರಲ್ಲಿ ಯಾರು ತುಂಬಾ ಶಕ್ತಿಶಾಲಿ ಎಂದು ಜಗಳ ಕಾಯುತ್ತಿ ದ್ದರು. ಆಗ ಒಂದು ದೊಡ್ಡ ಮರ ಉದ್ಭವ ಆಯಿತು. ಆ ಮರದಿಂದ ಬೇರು ಮತ್ತು ರೆಂಬೆ ಭೂಮಿ ಮತ್ತು ಆಕಾಶದಾಚೆ ಬೆಳೆಯಿತು. ಬ್ರಹ್ಮ ಮತ್ತು ವಿಷ್ಣು ಆ ಮರದ ಮೊದಲು ಮತ್ತು ಕೊನೆ ತುದಿ ಹುಡುಕಲು ಹೊರಟರು.ಬ್ರಹ್ಮ ಬಾತುಕೋಳಿಯಾಗಿ ಹಾರಿಕೊಂಡು ಮರದ ರೆಂಬೆಯ ಮೊದಲ ತುದಿ ಹುಡುಕಿಕೊಂಡು ಹೋದರು. ವಿಷ್ಣು ಹಂದಿಯಾಗಿ ಭೂಮಿಯನ್ನು ಅಗೆದು ಬೇರಿನ ಕೊನೆಯ ತುದಿ ಹುಡುಕಿಕೊಂಡು ಹೋದರು. ಆಗ ಈಶ್ವರ ಮರದ ಒಂದು ರೆಂಬೆ ಹೊರಗಡೆ ಬಂದರು. ಆಗ ಬ್ರಹ್ಮ ಮತ್ತು ವಿಷ್ಣುವಿಗೆ ಈಶ್ವರನ ಅಪಾರ ಶಕ್ತಿ ಗೊತ್ತಾಯಿತು. ಆ ದಿನದಿಂದ ಬ್ರಹ್ಮ ಮತ್ತು ವಿಷ್ಣು, ಈಶ್ವರ ಮೂರನೇ ಸರ್ವೋಚ್ಚ ದೇವರು ಎಂದು ನಂಬಿದರು ಮತ್ತು ಪ್ರಪಂಚವನ್ನು ನೋಡಿಕೊಳ್ಳುವವರು ಎಂದು ಗೊತ್ತಾಯಿತು. ಇದು ಈಶ್ವರನ ಪ್ರಸಿದ್ದ ಕಥೆಗಳಲ್ಲಿ ಒಂದು.



**ಜನವರಿಯ ರಜಾದಿನಗಳು & ಐತಿಹಾಸಿಕ ಘಟನೆಗಳು : ನಮಿತ ಪಂಡಿತ್**

**ಜನವರಿ 02, 1915 : ಪ್ರಸಿದ್ಧ ಕವಿ, ಕೆ.ಎಸ್. ನರಸಿಂಹಸ್ವಾಮಿ ಈ ದಿನ ಜನಿಸಿದರು.**

- **ಜನವರಿ 07, 1938 : ಬಿ. ಸರೋಜಾ ದೇವಿ, ಪ್ರಸಿದ್ಧ ನಟಿ, ಈ ದಿನ ಜನಿಸಿದರು**
- **ಜನವರಿ 11, 1973 : ರಾಹುಲ್ ದ್ರಾವಿಡ್, ಪ್ರಸಿದ್ಧ ಭಾರತೀಯ ಕ್ರಿಕೆಟ್ ,ಆಟಗಾರ & ತರಬೇತುದಾರ, ಈ ದಿನ ಜನಿಸಿದರು.**
- **ಜನವರಿ 20, 1920 : ಬಿ. ವಿಠಲಚಾರ್ಯ, ಪ್ರಸಿದ್ಧ ಚಲನಚಿತ್ರ ನಿರ್ಮಾಪಕ, ಈ ದಿನ ಜನಿಸಿದರು.**
- **ಜನವರಿ 28, 1925 : ಪ್ರಸಿದ್ಧ ವಿಜ್ಞಾನಿ ರಾಜಾ ರಾಮಣ್ಣ ಈ ದಿನ ಜನಿಸಿದರು**
- **ಜನವರಿ 29, 1984 : ಮಿಸ್ ಅರ್ಥ್ ಕಿರೀಟವನ್ನು ಪಡೆದ ಪ್ರಸಿದ್ಧ ಭವ್ಯ ಗೌಡ, ಈ ದಿನ ಜನಿಸಿದರು.**

# ಚಿಣ್ಣರ ಚಿತ್ರ ಕಲೆ




ಸಾನ್ವಿ ಗೌಡರ್




ಅಕ್ಷಜ್ ಕೃಷ್ಣ




ಪೂರ್ವಿ ವಿಜಯ್




ಅಭಿಜ್ಞಾ ನಾಗೇಶ್



## ನಾ ಕಂಡ ಸಿನಿಮಾ : ಪ್ರೇರಣ & ಮಹೇಶ್

### ಆಪರೇಷನ್ ಅಲಮೇಲಮ್ಮ (ಕನ್ನಡ ಚಲನಚಿತ್ರ -೨೦೧೭)




ಹೆಸರು ಹೇಳೋ ಹಾಗೆ ಇದು ಒಂದು ಪತ್ತೆದಾರಿ ಕಥೆ ಇರೋ ಚಲನಚಿತ್ರ. ಹಾಗೆಯೇ ಇಲ್ಲಿ ಸಾಕಷ್ಟು ಹಾಸ್ಯವೂ ಇದೆ.

ಪರ್ಮಿ ಎನ್ನೋ ಯುವಕ ರಸ್ತೆಯಲ್ಲಿ ಹೋಗುವಾಗ ಅಲ್ಲಿ ಒಂದು ಚೀಲ ಬಿದ್ದಿರುತ್ತೆ. ಅದನ್ನು ಅವನು ಎತ್ತಿಕೊಂಡಾಗ, ಪೊಲೀಸರು ಬಂದು ಅವನ್ನ ಬಂಧಿಸಿ, ಪೊಲೀಸ್ ಸ್ಟೇಷನ್ಗೆ ಕರೆದುಕೊಂಡು ಹೋಗ್ತಾರೆ. ಇದಕ್ಕೆ ಕಾರಣ ಒಂದು ಹುಡುಗ ಕಿಡ್ನಾಪ್ ಆಗಿರೋದು. ಅಲ್ಲಿಂದ ಈ ಚಿತ್ರಕಥೆಯ ಕೂತುಹಲ ಶುರು. ಕಿಡ್ನಾಪ್ಪರ್ ಹಿಡಿಯೋಕೆ ಪದೇ ಪದೇ ಮಾಡುವ ಪೊಲೀಸ್ ಹಾಗು ಪರ್ಮಿ ಪ್ರಯತ್ನ ಗಂಭೀರಕ್ಕಿಂತ ಹೆಚ್ಚು ತಮಾಷೆಯಾಗಿ ಕಾಣುತ್ತೆ. ಕಿಡ್ನಾಪ್ ರಹಸ್ಯ ತಿಳಿಯೋಕೆ ನೀವು ಸಿನಿಮಾ ನೋಡಬೇಕು!!

ಒಟ್ಟಿನಲ್ಲಿ ಹೇಳೋದಾದ್ರೆ ಇದು ಎಲ್ಲರೂ ನೋಡುವಂಥ ಚಲನ ಚಿತ್ರ. ದೊಡ್ಡವರನ್ನಲ್ಲದೆ, ಮಕ್ಕಳನ್ನು ನಗಿಸಿ ಅವರು ಕೊನೆಯ ತನಕ ಕುಳಿತು ನೋಡುವಂತೆ ಮಾಡುತ್ತದೆ. ಹಿಂದಿನ ವರ್ಷದ ಯಶಸ್ವಿ ಚಲನಚಿತ್ರಗಳಲ್ಲಿ ಇದೂ ಒಂದು ಆಗಿರುವದರಲ್ಲಿ ಏನೂ ಆಶ್ಚರ್ಯವಿಲ್ಲ.

## ಸುಭಾಷಿತಗಳು : ಶ್ವೇತ ಮಹೇಶ್

"ಶ್ರದ್ಧೆಯೇ ಯಶಸ್ಸಿನ ಕೀಲಿ ಕೈ"

ನಿಮ್ಮ ಮೇಲೆ ನಿಮಗೆ ವಿಶ್ವಾಸವಿರಲಿ. ನಂತರ ಕನಸು, ಗುರಿಗಳೊಂದಿಗೆ ಕಠಿಣ ಪರಿಶ್ರಮ ಮತ್ತು ಶ್ರದ್ಧೆಯಿಂದ ಮುನ್ನಡೆದರೆ ಗುರಿ ತಲುಪುವುದು ಬಹಳ ಸುಲಭ ಎನ್ನುತ್ತಾರೆ ಅನುಭವಿಗಳು.

## ಜೋಕ್ಸ್ : ಆರುಶ್

**ಹುಲಿ**

ಟೀಚರ್: 'ಹುಲಿ ಅಟ್ಟಿಸಿಕೊಂಡು ಬಂತು'. ಇದು ಯಾವ ಕಾಲ.

ಗುಂಡ: ಕೆಟ್ಟಕಾಲ... ಮಿಸ್

**ಮೇಸ್ತ್ರು**

ಮೇಸ್ತ್ರು - ಐರನ್ ಇಲ್ಲದಿದ್ದರೆ ಏನಾಗುತ್ತದೆ?

ಗುಂಡ- ಬಟ್ಟೆ ಸುಕ್ಕುಗಟ್ಟಿರುತ್ತವೆ ಮೇಡಂ..

## ಗಾದೆಗಳು :

"ಕುಂಬಾರನಿಗೆ ವರ್ಷ , ದೊಣ್ಣೆಗೆ ನಿಮಿಷ."

ಯಾವುದೇ ಕಲಾಕೃತಿಯನ್ನು ಮಾಡಲು ಎಷ್ಟು ದೀರ್ಘ ಅವಧಿ , ತಾಳ್ಮೆ ಬೇಕು. ಕುಂಬಾರನೊಬ್ಬ ಹಲವಾರುದಿನಗಳ ಸಿದ್ಧತೆಗಳನ್ನು ಮಾಡಿಕೊಂಡು, ಬೆವರು ಸುರಿಸಿ ಮಡಕೆಗಳನ್ನು ತಯಾರಿಸುತ್ತಾನೆ. ಹೀಗೆ ಪರಿಶ್ರಮದಿಂದ ತಯಾರಿಸಿದ ಮಡಕೆಯನ್ನು ಸುಲಭವಾಗಿ ಒಡೆದು ಹಾಕಿ ಬಿಡಬಹುದು.. ಒಳ್ಳೆಯದನ್ನು ಮಾಡುವುದು ಕಷ್ಟ. ಕೆಟ್ಟದ್ದನ್ನು ಮಾಡುವುದು, ಹಾಳುಮಾಡುವುದು ಸುಲಭ. ಯಾವುದೇ ಒಂದನ್ನು ಸೃಷ್ಟಿ ಮಾಡುವುದು ಕಷ್ಟಮಾತ್ರವಲ್ಲ, ಸಾಕಷ್ಟು ಸಮಯಾವಕಾಶ ಬೇಕು. ನಾಶ ಮಾಡುವುದಕ್ಕೆ ಹೆಚ್ಚಿನ ಸಮಯ ಬೇಕಾಗುವುದಿಲ್ಲ ಎಂಬ ವಿಚಾರವನ್ನು ಈ ಗಾದೆ ಸ್ಪಷ್ಟಪಡಿಸುತ್ತದೆ.

## ಚಿತ್ರ ಶೀರ್ಷಿಕೆ : ಮಹೇಶ್ ನೀಲಕಂಠ



ಚಂದಿರ ತಂದ ಹುಣ್ಣಿಮೆ ರಾತ್ರಿ !



ಸಂಚಿಕೆ ೧

ಜನವರಿ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

## ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ –ಶಾರ್ಲೆಟ್

rajanisomayaji@gmail.com